ಓಎಸ್ 175/2020

**ಪಿ.ಡಬ್ಲ್ಯೂ: 01**

ದಿನಾಂಕಃ 11.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಂ ಎ ವಕೀಲರಿಂದಃ**

ನಾನು 10 ನೇ ತರಗತಿವರೆಗೆ ಓದಿರುತ್ತೇನೆ. ನಾನು ಗೃಹಿಣಿ. ನನಗೆ ಇಂಗ್ಲಿಷ್ ಓದಲು ಬರೆಯಲು ಬರುತ್ತದೆ. ವಾದಪತ್ರದಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ನಾನು ಮತ್ತು ನನ್ನ ಗಂಡ ಈ ದಾವೆಯನ್ನು ಹೂಡಲು ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ದಿಃ13.09.2017 ರ ಒಂದು ವಾರದ ಹಿಂದೆ 1 ಮತ್ತು 2 ನೇ ಪ್ರತಿವಾದಿಗಳು ನಾಲ್ಕೂವರೆ ಲಕ್ಷ ಹಣ ಬೇಕೆಂದು ನನ್ನ ಬಳಿ ಕೇಳಿದರು. ಪ್ರತಿವಾದಿಗಳು ಹಳೆ ಸಾಲ ತೀರಿಸಲು ಹಾಗೂ ವ್ಯವಸಾಯಕ್ಕಾಗಿ ಹಣಬೇಕೆಂದು ಕೇಳಿರುತ್ತಾರೆ. ಆ ಸಮಯದಲ್ಲಿ ಬಡ್ಡಿ ಮಾತುಕತೆಯಾಗಿರುತ್ತದಾ ಎಂದರೆ ಸಾಕ್ಷಿ ಇಲ್ಲ, ಮನೆ ಮತ್ತು ಖಾಲಿ ನಿವೇಶನದ ಬಗ್ಗೆ ಮಾತುಕತೆಯಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಯಾವಾಗ ಹಣವನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ನಾವು ದಿಃ13.09.2017 ರಂದು 1,10,000 ಮತ್ತು 1,00,000 ಗಳ 2 ಚೆಕ್ಕಾಗಿ ನೀಡಿರುತ್ತೇವೆ ಹಾಗೂ 1,90,000 ಗಳನ್ನು ನಗದಾಗಿ ಸಬ್ ರೆಜಿಸ್ಟ್ರಾರ್ ಕಛೇರಿಯಲ್ಲಿ ನೀಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ನಾನು, ಪ್ರತಿವಾದಿಗಳು ಹಾಗೂ ಚಿಕ್ಕ ಹುಣಸೂರಿನ ವಾಸಿಗಳಾದ ವೆಂಕಟೇಶ್ ಮತ್ತು ಸತೀಶ್ ರವರು ಹಾಜರಿದ್ದರು. ನಾನು ಈ ದಾವೆಯನ್ನು ಹಣ ವಸೂಲಾತಿಗಾಗಿ ಹೂಡಿದ್ದು ಹಾಗೂ ಇನ್ನಿತರೇ ಪ್ರಕರಣಗಳನ್ನೂ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ಸರ್ಕಾರಕ್ಕಾಗಿ ಆಸ್ತಿ ತೆರಿಗೆ ಕಟ್ಟಬೇಕೆಂದು ಲೇವಾದೇವಿ ವ್ಯವಹಾರ ಮಾಡುತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ತಕರಾರಿನಲ್ಲಿ ಯಾವ ವಿಚಾರಗಳನ್ನು ಬರೆದಿರುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ.

ಸಮಯಾವಕಾಶ ನೀಡಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.

ಓಎಸ್ **175/2020**

**ಪಿ.ಡಬ್ಲ್ಯೂ: 01**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.